

ಯುವವೇದಿಕೆ

# ವಿದ್ಯಾರ್ಥಿಗಳಿಗೆ ಸ್ಫೂರ್ತಿವಾಣಿ

ಸ್ವಾಮಿ ಗೌತಮಾನಂದ

*ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆಗಿರುವ ಸ್ವಾಮಿ ಗೌತಮಾನಂದಜಿಯವರು ಚೆನ್ನೈ ವಿವೇಕಾನಂದ ಕಾಲೇಜಿನ ಪದವಿ ಪ್ರದಾನ ಸಮಾರಂಭದಲ್ಲಿ ಮಾಡಿದ ಉಪನ್ಯಾಸದ ಕನ್ನಡಾನುವಾದ. ಅನುವಾದಕರು ಡಾ. ಹೆಚ್. ಪಾಂಡುರಂಗ ವಿಠಲ್*

ಸ್ನಾತಕ ಪದವಿ ಪಡೆಯುವಾಗ ಸಾಮಾಜಿಕ-ಆರ್ಥಿಕ-ನೈತಿಕ-ಆಧ್ಯಾತ್ಮಿಕವಾಗಿ ನೀವು ನಿಮ್ಮ ಕಾಲಮೇಲೆ ನಿಂತಿರಬೇಕು. ಬಂಧುಗಳು, ತಂದೆತಾಯಂದಿರ ಮೇಲಿನ ನಿಮ್ಮ ಅವಲಂಬನೆ ಸಾಮಾಜಿಕ ಜೀವನದಲ್ಲಿ ಕಡಮೆ ಆಗಿರಬೇಕು. ಹಣ ಗಳಿಸಲು ಪ್ರಯತ್ನ ಪಡಿ. ಅಥವಾ, ಓದು ಮುಂದುವರೆಸಿದರೆ, ವಿದ್ಯಾರ್ಥಿ ವೇತನ ಗಳಿಸಿ. ಹೀಗೆ ಸಾಧ್ಯವಾದಷ್ಟೂ ನಿಮ್ಮನ್ನೇ ಅವಲಂಬಿಸಿಕೊಳ್ಳಿ. ನಿಮ್ಮನ್ನು ವಿದ್ಯಾವಂತರನ್ನಾಗಿಸಿದ ತಂದೆತಾಯಂದಿರು ಇತರ ಸಮಾಜದ ಸದಸ್ಯರಿಗೆ ನೀವು ನೈತಿಕವಾಗಿ ಬದ್ಧರಾಗಿರುವುದನ್ನು ಅರಿತುಕೊಳ್ಳಿ. ಪ್ರೀತಿ, ಪ್ರಾಮಾಣಿಕತೆ, ನಿಃಸ್ವಾರ್ಥತೆ ಮತ್ತು ಕಠಿನ ದುಡಿಮೆಯ ಮೇಲೆ ನಿಮ್ಮ ಯಶಸ್ಸು ನಿಂತಿದೆ. ನೀವು ನಿಮ್ಮ ತಂದೆತಾಯಂದಿರು, ಶಿಕ್ಷಣಸಂಸ್ಥೆ, ಉಪಾಧ್ಯಾಯರು, ಬಂಧುಗಳು, ಸ್ನೇಹಿತರನ್ನು ಪ್ರೀತಿಸುತ್ತೀರಿ, ನಿಮಗೆ ತೋರಿದ ರೀತಿಯಲ್ಲಿ ಸಹಾಯ ಮಾಡುತ್ತೀರಿ ಎಂದು ನಾವು ನಿರೀಕ್ಷಿಸುತ್ತೇವೆ. ನಿಮ್ಮ ಹೃದಯ ಇದರಿಂದ ವಿಶಾಲವಾಗುತ್ತದೆ. ಇದರಿಂದ ಕುಟುಂಬ ಮತ್ತು ಸಮಾಜದೊಡನೆ ನಿಮ್ಮ ಸಂಬಂಧ ಮಧುರವಾಗುತ್ತದೆ ಹಾಗೂ ನಿಮ್ಮ ಜೀವನವೂ ಆನಂದಮಯವಾಗುತ್ತದೆ. ಇತರರನ್ನು ಪ್ರೀತಿಸುವ, ಸಹಾಯ ನೀಡುವ ಈ ಮೌಲ್ಯಗಳನ್ನು ಕಡೆಗಾಣಿಸಿದ್ದೇ ಆದರೆ ನಿಮ್ಮ ಜೀವನವನ್ನು ದುಃಖ ಮತ್ತು ಅಭದ್ರತೆಯತ್ತ ಕೊಂಡೊಯ್ಯುವಿರಿ. ಜಗತ್ತಿನ ಸಂಪತ್ತು, ಸಲಕರಣೆಗಳಾವುವೂ ನಿಮ್ಮ ಜೀವನದಲ್ಲಿ ಒಂದು ಹನಿ ಆನಂದವನ್ನೂ ನೀಡಲಾರವು; ಏಕೆಂದರೆ, ಇತರರ ಜತೆಗೆ ಹಂಚಿಕೊಳ್ಳುವ ಪ್ರೀತಿಯ ಫಲವೇ ಆನಂದ.

*ಜೀವನದ ರಹಸ್ಯ ಸುಖವನ್ನು ಪಡೆಯುವುದಲ್ಲ, ಅನುಭವದ ಮೂಲಕ ಶಿಕ್ಷಣವನ್ನು ಪಡೆಯುವುದು.*
*—ಸ್ವಾಮಿ ವಿವೇಕಾನಂದ*

ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ಕಾರಣವಾಗುವ ಉದ್ಯೋಗದಲ್ಲಿನ ಮುನ್ನಡೆ ನಿಮ್ಮ ಪ್ರಮುಖ ಆಸಕ್ತಿಯಾಗಬೇಕು. ಇಂಥ ಯಶಸ್ಸನ್ನು ಪಡೆಯುವವರೆಗೆ ಓದು, ಗಳಿಕೆ ಎರಡೂ ಒಟ್ಟಿಗೆ ಮುಂದುವರೆದರೆ ಒಳಿತು. ಕುಟುಂಬದಲ್ಲಿ, ಸಮಾಜದಲ್ಲಿ ಅಥವಾ ವ್ಯವಹಾರದಲ್ಲಿ ಸತ್ಯ ಮತ್ತು ಪ್ರಾಮಾಣಿಕತೆ ಇದ್ದರೆ ಆರೋಗ್ಯ, ಬೆಳವಣಿಗೆ ಮತ್ತು ತೃಪ್ತಿ ಸಿಕ್ಕುತ್ತವೆ; ಇವು ನಮ್ಮ ಪ್ರತಿ ಕೆಲಸದಲ್ಲೂ ಇದ್ದರೆ ಸಮಾಜದಲ್ಲಿ ಗೌರವ ಸಿಗುತ್ತದೆ. ಸತ್ಯ ಹೇಳು, ಧರ್ಮದಲ್ಲಿ ನಡೆ ಎಂಬಿವು ಜೀವನದಲ್ಲಿ ಯಶಸ್ಸಿನ ಸೋಪಾನಗಳು. ತಪ್ಪುಗಳನ್ನು ಬಿಟ್ಟು ಸರಿಯಾದದ್ದನ್ನು ಆರಿಸಿಕೊಳ್ಳುವ ವಿವೇಕ ಬೆಳೆಸಿಕೊಳ್ಳಿ. ಸರಿಯಾದ ಕಾರ್ಯದಿಂದ ನಿಮಗೂ ಇತರರಿಗೂ ಆನಂದ ಉಂಟಾಗುತ್ತದೆ. ಮಹಾಯೋಗಾಚಾರ್ಯ ಪತಂಜಲಿ ಒಳ್ಳೆಯ ಕರ್ಮಗಳಿಂದ ಆನಂದ, ಕೆಟ್ಟ ಕರ್ಮಗಳಿಂದ ದುಃಖ ಬರುತ್ತದೆನ್ನುತ್ತಾರೆ. ಆನಂದದ ಬೀಜಗಳನ್ನು ಹುಟ್ಟುಹಾಕಲು ಸಾಧ್ಯವಾದ ಸಣ್ಣ, ದೊಡ್ಡ ಒಳಿತುಗಳನ್ನು ಮಾಡಿ; ನಿಮ್ಮ ಭವಿಷ್ಯವು ಶಾಂತಿ ಆನಂದಗಳಿಂದ ತುಂಬಿಕೊಳ್ಳಲಿ.

ಜೀವನವು ಒಂದು ಎದುರಿಸಬೇಕಾದ ಸವಾಲು. ಇದಕ್ಕೆ ಹೆಚ್ಚಾದ ದೈಹಿಕ, ಬೌದ್ಧಿಕ ಹಾಗೂ ನೈತಿಕ ಶಕ್ತಿಗಳು ಅಗತ್ಯ. ಇವೆಲ್ಲವನ್ನೂ ಭಾವ ಪರಿಶುದ್ಧತೆಯಿಂದ ಮಾತ್ರ ನಿರ್ಮಿಸಿಕೊಳ್ಳಬಹುದು. ಇದರ ಅರ್ಥ ಸ್ತ್ರೀಪುರುಷರು ಪರಸ್ಪರರ ಬಗೆಗಿನ ತಮ್ಮ ಯೋಚನೆ, ಭಾವನೆಗಳನ್ನು ಪರಿಶುದ್ಧವೂ ಉನ್ನತವೂ ಆಗಿರುವಂತೆ ಇಟ್ಟುಕೊಳ್ಳಬೇಕು. ಬ್ರಹ್ಮಚರ್ಯದಿಂದಲೇ ಶಕ್ತಿ ಎಂಬುದು ಪತಂಜಲಿಯ ಅಭಿಪ್ರಾಯ.

ಇತರರಿಗೆ ಸಹಾಯ ಮಾಡುವ, ನಿಮ್ಮನ್ನು ಉನ್ನತಿಗೊಯ್ಯುವ, ಬೆಳೆಸಬಲ್ಲ ಉತ್ತಮ ಆಕಾಂಕ್ಷೆಗಳಿಂದ ನಿಮ್ಮ ಮನಸ್ಸನ್ನು ತುಂಬಿ. ೧೯೩೬ರ ಒಲಂಪಿಕ್ಸ್‌ನಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಗೆದ್ದ ಜೆಸ್ಸಿ ಓವೆನ್ಸ್‌ನ ಕತೆ ಕೇಳಿ. ಆತ ಲಾಂಗ್ ಜಂಪ್‌ನ ಅರ್ಹತಾಸುತ್ತುಗಳಲ್ಲಿ ಎರಡು ಸಲ ರೇಖೆಯ ಆಚೆ ಕಾಲಿಟ್ಟ. ಅವನ ಪ್ರಮುಖ ಎದುರಾಳಿ, ಜರ್ಮನಿಯ ಡಾ. ಲಾಂಗ್ ಅವನಿಗೆ ಉಪಯುಕ್ತ ಸಲಹೆ ಸೂಚನೆ ನೀಡಿದ. ಇದರಿಂದ ತನ್ನ ದೌರ್ಬಲ್ಯವನ್ನು ಮೆಟ್ಟಿನಿಂತ ಜೆಸ್ಸಿ ಓವೆನ್ಸ್ ಅದೇ ಡಾ. ಲಾಂಗ್‌ನನ್ನು ಸೋಲಿಸಿ, ಹೊಸ ವಿಶ್ವವಿಕ್ರಮ ಸ್ಥಾಪಿಸಿದ. ಈ ಸ್ನೇಹಮಯಿ ಲಾಂಗ್‌ನನ್ನು ಅನಂತರ ಈ ಸ್ನೇಹದ ಹಸ್ತಕ್ಕಾಗಿ ಜೆಸ್ಸಿ ಓವೆನ್ಸ್ ತುಂಬ ಹೊಗಳಿ, ತನ್ನ ಕೃತಜ್ಞತೆಯನ್ನು ಮೆರೆದ. ಇಂತಹ ಹಣ-ಹೆಸರಿನ ಆಸೆ ಇಲ್ಲದ ಅತ್ಯುತ್ತಮ ಕ್ರೀಡಾ ಮನೋಭಾವ ಹಿಂದಿನ ಒಲಂಪಿಕ್ಸ್‌ಗಳಲ್ಲಿತ್ತು. ಇದು ಎಲ್ಲ ಶಿಕ್ಷಿತರ ಗುರಿಯಾಗಬೇಕು.

ಇತರರಿಗಾಗಿ ಮಿಡಿಯುವ ಹೃದಯವುಳ್ಳವ ಅತ್ಯುನ್ನತ ಸಾಧನೆ ಮಾಡಬಲ್ಲ. ೬೦ರ ದಶಕದಲ್ಲಿ ಎಂ. ಬಿ. ಬಿ. ಎಸ್. ಮಾಡಿದ

ಡಾ. ಬಾಲಸುಬ್ರಹ್ಮಣ್ಯಂ ಎಂಬ ತರುಣ ಸ್ವಾಮಿ ವಿವೇಕಾನಂದರ ಕೃತಿಗಳಿಂದ ಪ್ರಭಾವಿತನಾಗಿ, ಹೆಗ್ಗಡದೇವನ ಕೋಟೆಯ ಕುಗ್ರಾಮದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟನ್ನು ಸ್ಥಾಪಿಸಿದ. ದೂರದೂರಿನ ಆದಿವಾಸಿಗಳ, ಬಡವರ ಸೇವೆಯೇ ಆತನ ಮತ್ತು ಆತನ ಸ್ನೇಹಿತರ ಗುರಿಯಾಗಿತ್ತು. ಮೊದಲು ವೈದ್ಯಕೀಯ ಸೇವೆಯಿಂದ ಪ್ರಾರಂಭವಾದ ಈ ಕೇಂದ್ರ ಈಗ ನಲವತ್ತು ವೈದ್ಯರನ್ನೂ ಕೆಲವು ಇಂಜಿನಿಯರುಗಳನ್ನೂ ತಾಂತ್ರಿಕರನ್ನೂ ಆಕರ್ಷಿಸಿ, ಹಿಂದುಳಿದ ಆದಿವಾಸಿ ಮಕ್ಕಳಿಗೆ ಅನೇಕ ಶಾಲೆಗಳು, ವಸತಿಶಾಲೆಗಳು, ಸಂಚಾರಿಶಾಲೆಗಳು, ಉಪಾಧ್ಯಾಯ ತರಬೇತಿ ಶಿಬಿರಗಳು, ಹೈದರಾಬಾದ್, ದಿಲ್ಲಿ, ಗುವಾಹತಿಯ ವೈದ್ಯರೊಂದಿಗೆ ಟೆಲಿ ಮೆಡಿಸಿನ್ ಸೌಲಭ್ಯವುಳ್ಳ ದೊಡ್ಡ ಆಸ್ಪತ್ರೆ ಮುಂತಾದುವುಗಳನ್ನು ನಡೆಸುತ್ತಿದೆ. ಎಂತಹ ಅದ್ಭುತ ಸಾಧನೆ! ಬಡವರಿಗೂ ಅತಿ ಅಗತ್ಯವುಳ್ಳವರಿಗೂ ಇಂತಹ ಸೇವೆಯನ್ನು ಕೈಲಾದ ಮಟ್ಟಿಗೆ ಮಾಡುವಂತೆ ಇಂತಹ ಉದಾಹರಣೆಗಳು ನಿಮ್ಮನ್ನು ಪ್ರಚೋದಿಸಲಿ.

ನಮ್ಮ ಸರ್ಕಾರೇತರ ಸಂಸ್ಥೆಗಳಾದ ಉಲಂದೂರುಪೇಟೆಯ ವಿವೇಕಾನಂದ ವಿದ್ಯಾಲಯ, ವೆಳ್ಳಿಮಲೈಯ ವಿವೇಕಾನಂದ ಆಶ್ರಮ ಮೊದಲಾದುವು ತಮ್ಮ ಗ್ರಾಮೀಣ ವಲಯದಲ್ಲಿ ಸ್ತ್ರೀಯರ ಸಣ್ಣ ಉಳಿತಾಯ ಗುಂಪುಗಳಂತಹ ಯೋಜನೆಗಳಿಂದ ಕ್ರೂರಿ ಸಾಹುಕಾರರ ಸಾಲದ ವ್ಯವಸ್ಥೆಯನ್ನು ನಿರ್ಮೂಲ ಮಾಡಿವೆ. ಇಂತಹ ಸರ್ಕಾರೇತರ ಸಂಘಟನೆಗಳಿಗೆ ನೀವೂ ಕೈ ಜೋಡಿಸಿ ನಿಮ್ಮ ಬಡ ಸಹೋದರರಿಗೆ ಸಹಾಯ ಮಾಡಲಾರಿರಾ? ನಿಜಸಹಾಯವು ಶಿಕ್ಷಣ, ತರಬೇತಿಯಿಂದ ಮಾತ್ರ ಸಾಧ್ಯ. ಬಡವನಿಗೆ ಕೆಲವು ಕೆ.ಜಿ.ಗಳಷ್ಟು ಮೀನನ್ನು ದಾನವಾಗಿ ನೀಡುವ ಬದಲು ಗಾಳ ನೀಡಿ, ಮೀನು ಹಿಡಿಯುವುದನ್ನು ಕಲಿಸುವುದೇ ಸೂಕ್ತ.

*ವ್ಯಕ್ತಿಗಳು, ಗುಂಪುಗಳು, ದೇಶಗಳ ನಡುವೆ ಉತ್ತಮ ಸೌಹಾರ್ದವನ್ನೂ, ವ್ಯಕ್ತಿತ್ವ ವಿಕಸನವನ್ನೂ ಸಾಧ್ಯವಾಗಿಸುವ, ಜ್ಞಾನಕೌಶಲಗಳನ್ನು ಉತ್ತಮವಾಗಿಸುವ ಸಾಧನವೇ ಶಿಕ್ಷಣ.*

ಯುನೆಸ್ಕೋದ ಜಾಕ್ವಿಸ್ ಡೇಲರ್ ಕಮಿಷನ್ನಿನ ಶಿಕ್ಷಣದ ಮೇಲಿನ ವರದಿಯ ಕೆಲವು ಸಾಲುಗಳು ಉಲ್ಲೇಖನೀಯ: "ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಶಾಂತಿಗಳ ಆದರ್ಶವನ್ನು ಸಾಧಿಸಲು ಶಿಕ್ಷಣವು ಅತ್ಯಗತ್ಯ ಆಸ್ತಿ... ಯುದ್ಧ, ಶೋಷಣೆ, ಅಜ್ಞಾನ, ಬಹಿಷ್ಕಾರ, ಬಡತನಗಳನ್ನು ಕಡಮೆ ಮಾಡಬಲ್ಲ, ಹೊಂದಾಣಿಕೆಯ ಮಾನವ ಅಭಿವೃದ್ಧಿಯನ್ನು ಹೆಚ್ಚಿಸಲು ಮುಖ್ಯ ಉಪಕರಣವಾಗಿರುವ ಇದು ಒಂದು ಪವಾಡವೇನಲ್ಲ. ವ್ಯಕ್ತಿಗಳು, ಗುಂಪುಗಳು, ದೇಶಗಳ ನಡುವೆ ಉತ್ತಮ ಸೌಹಾರ್ದವನ್ನೂ, ವ್ಯಕ್ತಿತ್ವ ವಿಕಸನವನ್ನೂ ಸಾಧ್ಯವಾಗಿಸುವ, ಜ್ಞಾನಕೌಶಲಗಳನ್ನು ಉತ್ತಮವಾಗಿಸುವ ಸಾಧನವೇ ಶಿಕ್ಷಣ."

ಯುದ್ಧಗಳನ್ನು ನಿವಾರಿಸಿ ಮತ್ತು ಶಾಂತಿ ಸಹಕಾರಗಳ ಸಂಸ್ಕೃತಿಯನ್ನು ಬೆಳೆಸಲು ಮಾನವತೆಗೆ ಸಹಾಯ ಮಾಡಲೆಂದು ಯುನೆಸ್ಕೋವನ್ನು ರಚಿಸಲಾಯಿತು. ವಿವಿಧ ರೀತಿಯ ಜನರನ್ನು ಒಟ್ಟಿಗೆ ತರುವುದರ ಮೂಲಕ ಪರಸ್ಪರ ಸಹಾಯ, ಹೊಂದಾಣಿಕೆ, ಸೌಹಾರ್ದ, ಶಾಂತಿಗಳ ವಿಶ್ವಸಂಸ್ಕೃತಿಯನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಜಾಗತೀಕರಣ ಸಾಧಿಸಲು ಪ್ರಯತ್ನಿಸಿದೆ. ಇಂತಹ ಸಂಸ್ಕೃತಿಯನ್ನು ಬೆಳೆಸುವುದು ಹೇಗೆಂಬುದನ್ನು ಮಾನವತೆ ಇನ್ನೂ ಅರಿಯಬೇಕು. ಎರಡನೇ ಮಹಾಯುದ್ಧದಲ್ಲಿ ೫ ಕೋಟಿ ಜನ ಸತ್ತರು. ಅಂದಿನಿಂದ ಇಂದಿನವರೆಗೆ ನೂರೈವತ್ತು ಸಣ್ಣಯುದ್ಧಗಳಲ್ಲಿ ೨ ಕೋಟಿ ಜನ ಸತ್ತಿದ್ದಾರೆ.

ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ನಾವು ಶಾಂತಿಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವಂತೆ ಜನರನ್ನು ಶಿಕ್ಷಿತರನ್ನಾಗಿಸಬೇಕು. ಶಿಕ್ಷಣ ಮತ್ತು ಆಧ್ಯಾತ್ಮಿಕ ತರಬೇತಿಯ ಕೆಲಸವೇ ಇದು. ಯುನೆಸ್ಕೋ ವರದಿ ತಿಳಿಸುವಂತೆ "ನಾವು ನಮ್ಮ ನೆರೆಯಲ್ಲಿ, ಹಳ್ಳಿಯಲ್ಲಿ, ನಗರ, ರಾಜ್ಯ, ದೇಶಗಳಲ್ಲಿ ಚೆನ್ನಾಗಿ ಹೊಂದಿಕೊಂಡು ಜೀವನ ನಡೆಸುವುದನ್ನು ಕಲಿತರೆ ಮಾತ್ರ ಜಾಗತಿಕವಾಗಿ ಒಟ್ಟಿಗೆ ಜೀವಿಸಬಲ್ಲ ಬೆಳವಣಿಗೆ ಕಾಣಬಹುದು. ಸಮಾಜಕ್ಕೆ ಕೊಡುವುದರ ಮೂಲಕ ನಾವು ಇದನ್ನು ಸಾಧಿಸಬಹುದು." ಪ್ರಜಾಪ್ರಭುತ್ವಕ್ಕೆ ಇದು ಕೇಂದ್ರಪ್ರಶ್ನೆ.

ಈ ವರದಿ ಜಾಗತೀಕರಣದ ಬೆಳವಣಿಗೆಯಲ್ಲಿ ತಲೆ ಎತ್ತುತ್ತಿರುವ ಅನೇಕ ಬಿಗಿತ(tensions)ಗಳನ್ನು ಪ್ರಸ್ತಾಪಿಸುತ್ತದೆ. ಆಧ್ಯಾತ್ಮಿಕ ಹಾಗೂ ಲೌಕಿಕದ ನಡುವೆ ಇರುವ ಬಿಗಿತ ಅದರಲ್ಲಿ ಒಂದು. ಆಧ್ಯಾತ್ಮಿಕ ಆದರ್ಶ, ಮೌಲ್ಯಗಳು ಎಲ್ಲರಲ್ಲೂ ಇವೆ. ನೈತಿಕತೆ ಎನ್ನುವ ಈ ಅಂಶದ ಬೆಳವಣಿಗೆಯ ಮೇಲೆಯೇ ಮಾನವನ ಉಳಿವು ಅವಲಂಬಿಸಿದೆ. ವರದಿ ಮತ್ತೂ ಸೂಚಿಸುತ್ತದೆ : "ಶಿಕ್ಷಣದ ನೈತಿಕ ಸಾಂಸ್ಕೃತಿಕ ಆಯಾಮಗಳ ಮೇಲೆ ಹೊಸ ಒತ್ತು ನೀಡಬೇಕೆಂಬುದರ ಹಿಂದೆ ಮುಖ್ಯ ಕಾರಣವಿದೆ. ಇತರರ ವ್ಯಕ್ತಿಭಾವವನ್ನೂ ಹಾಗೂ ವಿಶ್ವವು ಏಕತೆಯತ್ತ ಸರಿಯುತ್ತಿದೆ ಎಂಬುದನ್ನೂ ಅರ್ಥಮಾಡಿಕೊಳ್ಳುವುದಕ್ಕೆ ಇದು ಅಗತ್ಯ. ಜ್ಞಾನ, ಧ್ಯಾನ, ಸ್ವ-ವಿಮರ್ಶೆಗಳೊಡನೆ ಅಂತರಂಗ ಯಾತ್ರೆ ಮಾಡುವುದರ ಮೂಲಕ ಈ ಪ್ರಕ್ರಿಯೆ ಪ್ರಾರಂಭವಾಗಬೇಕು. ೮೦ ಕೋಟಿ ಅವಿದ್ಯಾವಂತರು, ೧೩ ಕೋಟಿ ಮಕ್ಕಳು, ೧೦ ಕೋಟಿ ಶಾಲೆ ತೊರೆದವರು—ಇವರೆಲ್ಲರಿಗೂ ಈ ಮಾದರಿಯ ಸಂಸ್ಕೃತಿ ಶಿಕ್ಷಣ ಸಿಕ್ಕಬೇಕಾಗಿದೆ."

ಈ ದಿನಗಳಲ್ಲಿ ವಿಶ್ವದ ಸಾಮಾಜಿಕ, ರಾಜಕೀಯ ಜೀವನದಲ್ಲಿ ಸಂಸ್ಕೃತಿಯು ವಿಶೇಷ ಪಾತ್ರ ವಹಿಸುತ್ತಿದೆ. ಜಡವಿಜ್ಞಾನ, ತಾಂತ್ರಿಕ ಯುಗದ ಹಂತದಿಂದ ಸಾಂಸ್ಕೃತಿಕ, ಆಧ್ಯಾತ್ಮಿಕ ಹಂತಕ್ಕೆ ಪಾದಾರ್ಪಣ ಮಾಡುವ ಯುಗಸಂಧಿಯಲ್ಲಿ ನಾವಿದ್ದೇವೆ. ಒಂದು ಉದಾಹರಣೆ : ಶೀತಲ ಯುದ್ಧಾನಂತರದ ವಿಶ್ವರಾಜಕೀಯದ ತಜ್ಞ ಸ್ಯಾಮ್ಯುಯಲ್ ಪಿ. ಹಂಟಿಂಗ್‌ಟನ್ ತನ್ನ *Clash of*

*Cultures* ಎಂಬ ಕೃತಿಯಲ್ಲಿ, ಮಾಸ್ಕೋದಲ್ಲಿ ನಡೆದ ರಷ್ಯನ್ ಮತ್ತು ಅಮೆರಿಕನ್ ವಿದ್ವಾಂಸರ ಮುಖ್ಯ ಸಭೆಯೊಂದನ್ನು ಉಲ್ಲೇಖಿಸುತ್ತಾನೆ. ಹಿಂದೆ ಆ ಸಭೆಯ ವೇದಿಕೆಯಲ್ಲಿ ವಿರಾಜಮಾನವಾಗಿರುತ್ತಿದ್ದ ಲೆನಿನ್ ಪ್ರತಿಮೆ ಈಗ ಇಲ್ಲ; ಅಲ್ಲದೆ ರಷ್ಯನ್ ಒಕ್ಕೂಟದ ಧ್ವಜ ತಲೆಕೆಳಗಾಗಿ ನೇತಾಡುತ್ತಿದೆ! ಇದು ಬದಲಾವಣೆಯ ಸಂಧಿಕಾಲ. ಹಳೆಯ ವಿಚಾರಗಳು ಎಸೆಯಲ್ಪಟ್ಟಿವೆ; ಹೊಸವು ಇನ್ನೂ ಸ್ಥಾನಮಾನ ಪಡೆದಿಲ್ಲ.

ಜನರು ತಂತಮ್ಮ ಸಂಸ್ಕೃತಿಯ ಬೇರುಗಳಿಗೆ ಹಿಂದಿರುಗುತ್ತಿರುವುದನ್ನು ಆತ ಗಮನಿಸುತ್ತಾನೆ: ೧೯೯೪ರಲ್ಲಿ ಸಾರಯೇವೋ ಮುಸ್ಲಿಮರು ಹಿಂದಿನಂತೆ ವಿಶ್ವಸಂಸ್ಥೆ ಅಥವಾ ನೇಟೋಗಳತ್ತ ನೋಡದೆ ಸೌದಿ ಅರೇಬಿಯಾ, ಟರ್ಕಿಗಳ ಧ್ವಜದಡಿ ಸಂಘಟಿತರಾದರು. ಅದೇ ವರ್ಷ ಲಾಸ್ ಎಂಜಲಿಸ್‌ನಲ್ಲಿ ಮೆಕ್ಸಿಕನರು ತಮ್ಮ ಮೂಲ ಸಂಸ್ಕೃತಿಯ ಮೆಕ್ಸಿಕೊ ಧ್ವಜದ ಜತೆ ಮೆರವಣಿಗೆ ಹೋದರು—ಅಮೆರಿಕ ಧ್ವಜವನ್ನು ತಲೆಕೆಳಗು ಮಾಡಿ ಹಿಡಿದರು. ಅವರು ತಮ್ಮ ವಿಚಾರವನ್ನು ಒತ್ತಿ ಹೇಳುವಲ್ಲಿ ಸಫಲರಾದರು. ಹೀಗೆ ಹಂಟಿಂಗ್‌ಟನ್ ೨೧ನೆಯ ಶತಮಾನದ ಪ್ರಪಂಚದ ಹೊಸ ಶಕ್ತಿಕೇಂದ್ರಗಳು ಇಂಡಿಯಾ, ಚೀನಾ, ಜಪಾನ್, ಅಮೆರಿಕ, ಯುರೋಪ್ ಮತ್ತು ರಷ್ಯಾದ ಸಂಸ್ಕೃತಿಕೇಂದ್ರಗಳಾಗಿರುತ್ತವೆಂದು ತೀರ್ಮಾನಿಸುತ್ತಾನೆ. ಈ ಸಂಸ್ಕೃತಿಕೇಂದ್ರಗಳ ನಡುವಿನ ಸಂಘರ್ಷ ಅಪಾಯಕಾರಿ ಆದೀತೇ ವಿನಾ ರಾಜಕೀಯ-ಆರ್ಥಿಕ ಕೇಂದ್ರಗಳ ನಡುವಿನದಲ್ಲ. ಈಗ ಬೋಸ್ನಿಯಾದಲ್ಲಿ ನಾವು ಕಾಣುತ್ತಿರುವ ಮುಸ್ಲಿಂ ಮತ್ತು ಸರ್ಬರ (ಕ್ರಿಶ್ಚಿಯನ್) ನಡುವಣ ಜಗಳ ಇದಕ್ಕೆ ಉದಾಹರಣೆ—ಸೌದಿ ಅರೇಬಿಯಾ ಮುಸ್ಲಿಮರನ್ನೂ ರಷ್ಯ ಸರ್ಬರನ್ನೂ ಬೆಂಬಲಿಸುತ್ತಿವೆ.

> *ನಂಬಿಕೆ ಹಾಗೂ ಜ್ಞಾನದ ಅದ್ಭುತ ಮಿಶ್ರಣವನ್ನು ಹೊಂದಿರುವುದರಿಂದಾಗಿ ಭಾರತವು ಇತರ ದೇಶಗಳ ನಡುವೆ ವಿಶಿಷ್ಟ ಸ್ಥಾನ ಪಡೆಯುವಂತಾಗಿದೆ.*
>
> *—ಡಾ.ಅಬ್ದುಲ್ ಕಲಾಂ*

ಅಂತಾರಾಷ್ಟ್ರೀಯ ಚರ್ಚೆಯ ಮುಖ್ಯ ವಿಷಯಗಳು ಸಂಸ್ಕೃತಿಯ ವ್ಯತ್ಯಾಸಗಳಿಂದ ಕೂಡಿರುತ್ತವೆ ಎನ್ನುತ್ತಾನೆ ಹಂಟಿಂಗ್‌ಟನ್. ಬಹುಕಾಲದಿಂದಲೂ ಬಲವಾಗಿದ್ದ ಪಶ್ಚಿಮದಿಂದ ಶಕ್ತಿಯು ಇತರ ಪಶ್ಚಿಮೇತರ ದೇಶಗಳತ್ತ ಪಲ್ಲಟಗೊಳ್ಳುತ್ತಿದೆ. ಶ್ರೀರಾಮಕೃಷ್ಣರಿಂದ ಮಂಡಿಸಲ್ಪಟ್ಟ ವೇದಾಂತವು ತತ್ತ್ವ ಹಾಗೂ ಸಂಸ್ಕೃತಿಯಾಗಿ ಒಂದೆಡೆ ವಿಶ್ವದ ಎಲ್ಲ ಧರ್ಮಗಳನ್ನೂ ಇನ್ನೊಂದೆಡೆ ಎಲ್ಲ ವಿಜ್ಞಾನಗಳನ್ನೂ ಸಮನ್ವಯಗೊಳಿಸಬಲ್ಲುದು; ಏಕೆಂದರೆ ಅದು ಅನುಭವ ಹಾಗೂ ತರ್ಕದ ಮೇಲೆ ನಿಂತಿದೆ ಎಂದು ವಿಶ್ವಕ್ಕೇ ಸ್ವಾಮಿ ವಿವೇಕಾನಂದರು ತೋರಿಸಿಕೊಟ್ಟಿದ್ದಾರೆ.

ನಂಬಿಕೆ ಹಾಗೂ ಜ್ಞಾನದ ಅದ್ಭುತ ಮಿಶ್ರಣವನ್ನು ಹೊಂದಿರುವುದರಿಂದಾಗಿ ಭಾರತವು ಇತರ ದೇಶಗಳ ನಡುವೆ ವಿಶಿಷ್ಟಸ್ಥಾನ ಪಡೆಯುವಂತಾಗಿದೆ ಎಂದು ನಮ್ಮ ಗೌರವಾನ್ವಿತ ರಾಷ್ಟ್ರಾಧ್ಯಕ್ಷ ಡಾ. ಅಬ್ದುಲ್ ಕಲಾಂ ಹೇಳುತ್ತಾರೆ. (*Ignited Minds*, preface xi) ಭೌತಿಕವಾಗಿ ಪ್ರಗತಿ ಸಾಧಿಸಿದ್ದರೂ ಪಶ್ಚಿಮದ ಪ್ರಪಂಚ ತನ್ನ ನೈತಿಕ ಅಡಿಪಾಯವನ್ನೇ ಕಳೆದುಕೊಂಡಿದೆ. ನೊಬೆಲ್ ಪ್ರಶಸ್ತಿ ವಿಜೇತ ಹೈಸನ್‌ಬರ್ಗ್ ಐನ್‌ಸ್ಟೈನರಿಗೆ ಹೀಗೆಂದು ಹೇಳುತ್ತಾರೆ: "ಎಲ್ಲ ಅನುಕೂಲತೆಗಳನ್ನು ಹೊಂದಿದ ಆದರೆ ದಿಕ್ಸೂಚಿ ಇಲ್ಲದ ನೌಕೆಯಂತಿದೆ ಪಶ್ಚಿಮ.... ಗಾಂಧೀ, ಟಾಗೋರ್‌ರಂಥ ಮಾನವರು ದಿಕ್ಸೂಚಿಯನ್ನು ಕಂಡುಕೊಂಡಿದ್ದಾರೆ. ಪಶ್ಚಿಮ ಮತ್ತು ಭಾರತ ಜತೆಯಾಗಿ ಗುರಿ ಸೇರುವಂತೆ, ಈ ದಿಕ್ಸೂಚಿಯನ್ನೇಕೆ ನೌಕೆಯಲ್ಲಿ ಇಡಬಾರದು?" (*Ignited Minds*, p.5)

ಈ ಮಾತು ಸ್ವಾಮಿ ವಿವೇಕಾನಂದರ ಉನ್ನತ ವಿಚಾರಗಳ ಜತೆ ಸಾಮ್ಯ ಹೊಂದಿದೆ. ನಮ್ಮ ತರುಣರು ಅತ್ಯಾಧುನಿಕ ತಾಂತ್ರಿಕತೆ, ವಿಜ್ಞಾನಗಳ ಜತೆಗೇ ಪ್ರಾಯೋಗಿಕ ಅಧ್ಯಾತ್ಮದಲ್ಲೂ ಪರಿಣತಿ ಸಾಧಿಸಬೇಕೆಂದು ಅವರು ಹೇಳಿದ್ದರು. ಈ ದಿನಗಳಲ್ಲಿ, ಕಲಿಯುವಿಕೆ ಮತ್ತು ಸಂಸ್ಕೃತಿಗಳನ್ನು ಪರಿಗಣಿಸಿದರೆ, ಅಮೆರಿಕದಲ್ಲಿನ ವಲಸೆಗಾರ ಸಮಾಜಗಳಲ್ಲಿ ಭಾರತೀಯರೇ ಮುಂಚೂಣಿಯಲ್ಲಿದ್ದಾರೆ. ಪಶ್ಚಿಮಕ್ಕೆ ಹೋಗುವ ನಮ್ಮ ತರುಣರು ವಿಶ್ವವಿದ್ಯಾನಿಲಯದ ಪದವಿಗಳ ಜತೆಗೇ ಆಧ್ಯಾತ್ಮಿಕ ನೈತಿಕ ವ್ಯಕ್ತಿತ್ವವನ್ನೂ ಪಡೆದುಕೊಂಡು ಹೋಗಬೇಕು. ಪಾಶ್ಚಾತ್ಯರಿಗೆ ಆಧ್ಯಾತ್ಮಿಕತೆಯ ಸಾರವನ್ನು ಉಣಬಡಿಸಬೇಕು. ಅದೆಂದರೆ (i) ***ವಿಶ್ವದ ದೈವಿಕ ಏಕತೆ*** (ii) ***ಮಾನವನ ದೈವಿಕತೆ*** (iii) ***ಮಾನವನ ಸೇವೆಯೇ ದೇವನ ಉನ್ನತ ಆರಾಧನೆ*** (iv) ಎಲ್ಲ ***ಧರ್ಮ, ಸಂಸ್ಕೃತಿಗಳಿಗೆ ಸಮಾನ ಗೌರವ. ವಿವೇಕದ, ಶಾಂತಿಯ, ಸಹಬಾಳ್ವೆಯ ಒಂದು ಸಂಸ್ಕೃತಿ—ಭಾರತೀಯ ಸಂಸ್ಕೃತಿ*** ಎಂಬುದನ್ನು ಅವರು ತಮ್ಮ ಬಾಳುವಿಕೆಯಿಂದಲೇ ಪಾಶ್ಚಾತ್ಯರಿಗೆ ತೋರಿಸಿಕೊಡಬೇಕು. ಒಬ್ಬ ಪಾತ್ಯತೀತ ವ್ಯಕ್ತಿಗಿಂತಲೂ ಹೆಚ್ಚು ಧೈರ್ಯದ, ಶಕ್ತಿಶಾಲಿ, ಕ್ರಿಯಾಶಾಲಿ ನಾಯಕತ್ವವನ್ನು ವೇದಾಂತಿ ನೀಡಬಲ್ಲನೆಂದು ತಮ್ಮ ಬದುಕಿನಿಂದಲೇ ತೋರಿಸಿಕೊಡಬೇಕು. ನಮಗೆ ಅಂತಹ ಯೋಗ್ಯತೆ ಇದೆಯೆ ಎಂದು ನೀವು ಕೇಳಿದರೆ, ಖಂಡಿತವಾಗಿಯೂ ಇದೆ ಎಂದು ನಾನು ಹೇಳುತ್ತೇನೆ.

೧೯೯೫ರಲ್ಲಿ ಅಹಮದಾಬಾದ್ ಹತ್ತಿರದ ಚಂಗಾ ಎಂಬ ಹಳ್ಳಿಯಲ್ಲಿ ೨೧ ವರ್ಷದ ಸುಧಾ ಪಟೇಲ್ ಎಂಬ ತರುಣಿ ದೇಶದ ಪ್ರಥಮ ಅಂಧ ಸರಪಂಚಳಾಗಿ ಆಯ್ಕೆಯಾದಳು! ದನಿಯಿಂದಲೆ ತನ್ನ ಹಳ್ಳಿಯವರನ್ನೆಲ್ಲ ಗುರುತು ಹಿಡಿಯಬಲ್ಲ ಪ್ರಜ್ಞಾಶಾಲಿ ಆಕೆ. ತನ್ನ ಹಳ್ಳಿಯ ೪೯೩ ಕುಟುಂಬಗಳಿಗೆ ಒಂದು ಆಸ್ಪತ್ರೆ, ಕಂಪ್ಯೂಟರುಗಳುಳ್ಳ ಶಾಲೆಗಳು, ಅಂಧರು-ಅಂಗವಿಕಲರಿಗೆ ತರಬೇತಿ ಕೇಂದ್ರ—ಇವುಗಳನ್ನು ಆಕೆ ನಿರ್ಮಿಸಿಕೊಟ್ಟಿಳು. ಅಂಗವಿಕಲೆಯೊಬ್ಬಳು ಈ ಸಾಧನೆ ಮಾಡಬಹುದಾದರೆ, ವಿದ್ಯಾವಂತ ತರುಣರು ಇನ್ನೆಷ್ಟು ಸಾಧಿಸಬಲ್ಲರು! ಅನಂತ ಶಕ್ತಿ ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಇದೆ ಅನ್ನಿಸದೇನು? ಪ್ರೀತಿ, ಐಕ್ಯತೆ, ದೇಶ

ಭಕ್ತಿಯ ಜತೆ ಈ ಸಾಮರ್ಥ್ಯಗಳನ್ನು ಹೊರತರಬಲ್ಲ ಆಧ್ಯಾತ್ಮಿಕ ಜಾಗೃತಿ ನಮ್ಮಲ್ಲಿ ಉಂಟಾಗಬೇಕು.

ಈ ವರ್ಷ ತಿರುವೈಯಾರಿನ ತ್ಯಾಗರಾಜ ಆರಾಧನೆಯಲ್ಲಿ ನಾನೂ ಪಾಲ್ಗೊಂಡಿದ್ದೆ. ವಿವಿಧ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಿನ್ನೆಲೆ, ಹಂತಗಳ ಐದುಸಾವಿರ ಜನ ಒಗ್ಗಟ್ಟು, ಪ್ರೀತಿ, ಮಾಧುರ್ಯಗಳಿಂದ ತಮ್ಮ ನಡುವಿನ ಅಂತರಗಳನ್ನೆಲ್ಲ ಒತ್ತಟ್ಟಿಗಿಟ್ಟು ಭಕ್ತಕುಟುಂಬದ ಸದಸ್ಯರಲ್ಲಿ ಒಬ್ಬರಾಗಿ ಭಾಗವಹಿಸಿದ್ದರು. ಸರಿಯಾದ ಶಿಕ್ಷಣದಿಂದ ನಮ್ಮ ತರುಣರೆಲ್ಲರೂ ಆಧ್ಯಾತ್ಮಿಕವಾಗಿ ಬೆಳೆದಾಗ ನಮ್ಮ ದೇಶವೂ ಹೀಗೇ ಒಂದಾಗುತ್ತದೆ.

ನಮ್ಮ ದೇಶದ ಭವ್ಯ ಭವಿಷ್ಯವನ್ನು ಕುರಿತು ಸ್ವಾಮಿ ವಿವೇಕಾನಂದರು ಹಿಂಜರಿಯದ ಮಾತುಗಳಲ್ಲಿ ಹೀಗೆನ್ನುತ್ತಾರೆ: "ನನ್ನ ತಾಯಿನಾಡು, ಸ್ವರ್ಗದಲ್ಲಿನ ಅಥವಾ ಭೂಮಿಯಲ್ಲಿನ ಯಾವ ಶಕ್ತಿಯೂ ತಡೆಯಲು ಆಗದ ಧೀಮಂತ ಹೆಜ್ಜೆಗಳನ್ನು ಇಡುತ್ತ, ಮಾನವನು ತನ್ನ ಮೃಗತ್ವವನ್ನು ಹಿಂದಿಕ್ಕಿ ದೇವತ್ವವನ್ನು ಪಡೆಯುವಂತೆ ಮಾಡುವ ತನ್ನ ಗುರಿ ಸಾಧನೆಯತ್ತ, ತನ್ನ ಭವ್ಯ ಭವಿಷ್ಯದತ್ತ ಮುನ್ನಡೆಯುತ್ತಿರುವುದನ್ನು ನಾನು ಕಾಣುತ್ತಿದ್ದೇನೆ... ನಮ್ಮ ಪ್ರಾಚೀನ ವೈಭವದ ಹಿನ್ನೆಲೆಗಾಗಿ ಹೆಮ್ಮೆಪಡೋಣ. ರಾಮಚಂದ್ರನಂತಹ ನಮ್ಮ ನಾಯಕರನ್ನು ಪೂಜಿಸೋಣ. ನಾವು ಆತ್ಮವಿಶ್ವಾಸವನ್ನು ಗಳಿಸಿ ಮಹತ್ಕಾರ್ಯವನ್ನು ಸಾಧಿಸುವ ನಾಯಕರಾಗಲು ಇದು ಸಹಾಯ ಮಾಡುತ್ತದೆ."

*ಜಗತ್ತಿನಲ್ಲಿ ಧರ್ಮವನ್ನು ಅರ್ಥಮಾಡಿಕೊಳ್ಳುವ ಒಂದೇ ಒಂದು ದೇಶವಿದೆ—ಅದೇ ಭಾರತ.*

*—ಸ್ವಾಮಿ ವಿವೇಕಾನಂದ*

ಅತಿ ಸಮೃದ್ಧವಾದ ನಿಸರ್ಗ ಮತ್ತು ಮಾನವ ಸಂಪತ್ತು ಇದ್ದರೂ, ನಮ್ಮ ದೇಶವನ್ನು ಅಭಿವೃದ್ಧಿಗೊಳಿಸಲಾಗಿಲ್ಲ. ಏಕೆ? ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಮ್ಮ ದೀನ ದರಿದ್ರ ಜನಸಮೂಹದ ಬಗ್ಗೆ ನಮಗೆ ಪ್ರೀತಿ ಇಲ್ಲ." ತಂಜಾವೂರು ಬರಪರಿಹಾರ ಕಾರ್ಯದಲ್ಲಿ ನಾನು ಇದನ್ನು ಗಮನಿಸಿದೆ. ಹಸಿವಿನಿಂದ ಸತ್ತ ಪ್ರಕರಣಗಳ ಕಾರಣದ ಬಗ್ಗೆಯೇ ಜಗಳವಾಡುತ್ತ ಬಹು ಸಂಖ್ಯೆಯ ರಾಜಕಾರಣಿಗಳು ಸುತ್ತಾಡುತ್ತಿದ್ದರು. ಅವರಾರಿಗೂ ಒಂದು ಹಿಡಿ ಅನ್ನ ಹಿಡಿದು ದೀನ ಜನರತ್ತ ಹೋಗಬೇಕೆಂದು ಅನ್ನಿಸಲೇ ಇಲ್ಲ!

ಅಮೆರಿಕದ ಜನಪ್ರಿಯ ಲೇಖಕ ರಾಬರ್ಟ್ ಆರ್ನೆಟ್ ತನ್ನ *India Unveiled* ಎಂಬ ಪುಸ್ತಕದಲ್ಲಿ ಹೀಗೆನ್ನುತ್ತಾನೆ: "ಪಶ್ಚಿಮ ನೀಡಬಹುದಾದ ಎಲ್ಲ ಭೌತಿಕ ಸಂಪತ್ತು, ತಾಂತ್ರಿಕತೆಗಳಿಗಿಂತ ಭಾರತವು ತನ್ನ ಯೋಗವಿಜ್ಞಾನದಿಂದ ಅತಿ ಹೆಚ್ಚು ಮೌಲ್ಯದ ಕೊಡುಗೆ ನೀಡಿದೆ... ವಿಶ್ವದ ಎಲ್ಲ ದೇಶಗಳಿಗಿಂತ ಭಾರತ ಆಧ್ಯಾತ್ಮಿಕ ಸಂಪತ್ತಿನ ವರ ಹೊಂದಿದೆ. ಹೆಚ್ಚೆಚ್ಚು ಅಮೆರಿಕನ್ನರು ಭೌತಿಕತೆ ನಿರಂತರ ಸಂತೃಪ್ತಿಯನ್ನು ನೀಡಲಾರದೆಂದು ತಿಳಿದುಕೊಳ್ಳುತ್ತಿದ್ದಾರೆ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಭಾರತದತ್ತ ತಿರುಗುತ್ತಿದ್ದಾರೆ."

ಸ್ವಾಮಿ ವಿವೇಕಾನಂದರು ನಾವು ಅವತಾರವರಿಷ್ಠರಾದ ಶ್ರೀರಾಮಕೃಷ್ಣರನ್ನು ಅನುಸರಿಸಬೇಕೆನ್ನುತ್ತಾರೆ: "ಆತನ ಪದತಲದಲ್ಲಿ ಕುಳಿತಾಗ ಮಾತ್ರ ಭಾರತ ಉನ್ನತಿಗೇರಬಲ್ಲುದು... ಈ ಆಯ್ಕೆ ಮಾಡಿದವ ಕೀರ್ತಿವಂತನಾಗುವನು. ತಲೆಬಾಗಿದವ ಆ ಕ್ಷಣವೇ ಪುಟವಿಟ್ಟ ಬಂಗಾರವಾಗುವನು. ಈ ಸಂದೇಶವನ್ನು ಮನೆಮನೆಗೂ ತಲುಪಿಸಿ." ❄

## ಪ್ರಹಸನಪ್ರಸಂಗ

***ನಾವು ಆಧ್ಯಾತ್ಮಿಕ ಜೀವನವನ್ನು ಅನುಸರಿಸುವುದಕ್ಕಿಂತ ಬೋಧಿಸುವುದೇ ಜಾಸ್ತಿ. ಈ ಬೋಧಿಸುವ ಅಮಲು ಹೆಚ್ಚಾದಷ್ಟೂ, ಅನುಸರಿಸುವ ಪ್ರಜ್ಞೆ ಕಡಮೆಯಾಗುತ್ತ ಬರುತ್ತದೆ. ಅನುಷ್ಠಾನವಿಲ್ಲದಿದ್ದರೆ ನಾವು ಬೋಧಿಸುವುದು ನಮಗೇ ಅರ್ಥವಾಗಿರುವುದಿಲ್ಲ. "ವೇದಾಂತವೆಂದರೆ ನಮಗೆ ತಿಳಿಯದಿರುವುದನ್ನು ಇತರರಿಗೆ ಅರ್ಥವಾಗದ ರೀತಿಯಲ್ಲಿ ಹೇಳುವುದು"—ಎಂಬ ಮಾತು ಇಂಥ ಬೋಧಕರಿಗೆ ಅನ್ವಯವಾಗುತ್ತದೆ.***

ಒಬ್ಬ ಗಣಿತದ ಉಪಾಧ್ಯಾಯನಿದ್ದ. ಅವನಿಗೆ ಗಣಿತದ ಗಂಧವೆ ಇರಲಿಲ್ಲ. ಗೈಡ್ ಇಟ್ಟುಕೊಂಡು ಶಾಲೆಯಲ್ಲಿ ಗಣಿತದ ಲೆಕ್ಕ ಬಿಡಿಸುತ್ತಿದ್ದ. ಗೈಡ್‌ನಲ್ಲಿ ಹೇಗಿದೆಯೋ ಹಾಗೆಯೇ ಬೋರ್ಡ್‌ಮೇಲೆ ಬರೆಯುತ್ತಿದ್ದ.

ಒಂದು ದಿನ ಹೀಗೆ ಅವನು ಒಂದು ಲೆಕ್ಕವನ್ನು ಬೋರ್ಡಿನ ಮೇಲೆ ಬರೆದು ತೋರಿಸುತ್ತಿದ್ದ. ಒಮ್ಮೆ ಇಡೀ ಲೆಕ್ಕವನ್ನು ಬರೆದು ತೋರಿಸಿದ ಮೇಲೆ, "ಎಲ್ಲರಿಗೂ ಅರ್ಥವಾಯಿತೇ?" ಎಂದು ವಿದ್ಯಾರ್ಥಿಗಳನ್ನು ಕೇಳಿದ. ಸುಮಾರು ಅರ್ಧದಷ್ಟು ವಿದ್ಯಾರ್ಥಿಗಳು "ಅರ್ಥವಾಗಲಿಲ್ಲ, ಸಾರ್" ಎಂದು ಕೂಗಿದರು.

ಉಪಾಧ್ಯಾಯನು ಮತ್ತೊಮ್ಮೆ ಅದೇ ಲೆಕ್ಕವನ್ನು ಬರೆದು ತೋರಿಸಿ, "ಈಗಲಾದರೂ ಅರ್ಥವಾಯಿತೇನ್ರೋ?" ಎಂದು ಕೇಳಿದ. ಆಗಲೂ ಕೆಲವು ವಿದ್ಯಾರ್ಥಿಗಳು ಎದ್ದುನಿಂತು "ಇಲ್ಲ ಸಾರ್" ಎಂದು ಕೂಗಿದರು.

ಈಗ ಉಪಾಧ್ಯಾಯನು ಮೂರನೆ ಬಾರಿ ಬರೆದು ತೋರಿಸಿದನು. ಆಗ ಒಬ್ಬ ಹುಡುಗ ಎದ್ದುನಿಂತು, "ಅರ್ಥವಾಗಲಿಲ್ಲ, ಸಾರ್" ಎಂದು ಹೇಳಿದ. ಉಪಾಧ್ಯಾಯನು ಕೋಪದಿಂದ, "***ಮುಟ್ಠಾಳ, ಈಗ ನನಗೇ ಅರ್ಥವಾಯಿತು; ನಿನಗಿನ್ನೂ ಅರ್ಥವಾಗಲಿಲ್ಲವೇನೋ?***" ಎಂದನು.